# ಅತಿ ಭಾರದ ಬೈಸಿಕಲ್..!

ನೀವು ಎರಡು ಚಕ್ರವಿರುವ ಬೈಸಿಕಲ್‌ಗಳನ್ನು ಸುಲಭವಾಗಿ ಓಡಿಸುತ್ತೀರಿ ಅಲ್ಲವೇ? ಅಬ್ಬಬ್ಬಾ ಎಂದರೆ ಅದು ಎಷ್ಟು ಭಾರವಿದ್ದೀತು? ಚಿತ್ರದಲ್ಲಿ ನೋಡಿ ನೆದರ್ಲೆಂಡಿನ ವೌಟರ್ ವ್ಯಾನ್ ಡೆನ್ ಬೋಶ್ಚ್ ಈ ಬೈಸಿಕಲ್ ನಿರ್ಮಿಸಿದ್ದಾನೆ. ಇದರ ಭಾರವೆಷ್ಟು ಗೊತ್ತೇ? ಬರೋಬ್ಬರಿ 748.42 ಕೆ.ಜಿ.!

ಇದು ಗಿನ್ನೆಸ್ ದಾಖಲೆಯ ಪ್ರಕಾರ ಪ್ರಪಂಚದ ಅತ್ಯಂತ ಭಾರವಾದ ಸವಾರಿ ಮಾಡಬಹುದಾದ ಬೈಸಿಕಲ್!

ಇದು ಮೋಜಿಗಾಗಿ ಓಡಿಸಬಹುದಾದ ಬೈಸಿಕಲ್ ಅಲ್ಲ ಎಂದು ಗಿನ್ನೆಸ್ ವರದಿ ಹೇಳುತ್ತದೆ. ಇದೊಂದು ಆನೆಯಿದ್ದಂತೆ. ಇದನ್ನು ಹತ್ತಿ ಸವಾರಿ ಮಾಡಲು ನಿಮಗೆ ಗಂಡೆದೆಯ ಜೊತೆಗೆ ಪೆಡಲ್ ತುಳಿಯಲು ಬಲವಾದ ಕಾಲುಗಳಿರಬೇಕು. ಇಲ್ಲದಿದ್ದರೆ ಪಲ್ಟಿ ಗ್ಯಾರಂಟಿ!!

■ ಪ್ರಕಾಶ ಎಸ್. ಮನ್ನಂಗಿ



